**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಪಿ ಸಿ ಆರ್.225/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 03.07.2026

| | |
|---|---|
| ಹೆಸರು | ಅಡಿವೇಶಿ |
| ತಂದೆಯ ಹೆಸರು | ಬಸಪ್ಪ |
| ವಯಸ್ಸು | 62 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಡರನಾಯಕನಹಳ್ಳಿ |

**ಸಾಕ್ಷಿಯ ಪ್ರತಿಜ್ಞಾಪೂರಕ ಹೇಳಿಕೆಃ**

ದಿಃ 22.07.2025 ರಂದು ಕುಮಾರ, ಕುಬೇರಪ್ಪ ವಿ, ಮಂಜುನಾಥ, ಲೋಕೇಶ, ಗಣೇಶಪ್ಪ , ಮಂಜುನಾಥ, ಗುಡಿ ಪೂಜಾರಿ ಹೇಮಪ್ಪ, ಭೀಮೇಶ, ಅಶೋಕಪ್ಪ ಹಾಗೂ ಹಲವಾರು ಜನರು ಸೇರಿಕೊಂಡು ನಾವು ಕಟ್ಟಿರುವ ಮನೆಯ ಇಟ್ಟಿಗೆಗಳನ್ನು ಕೆಡವಿ, ಗಲಾಟೆ ಮಾಡಿರುತ್ತಾರೆ. ನಂತರ ನಾನು 112 ಗೆ ಕರೆ ಮಾಡಿರುತ್ತೇನೆ. ಆಗ ಪೋಲೀಸರು ಅಲ್ಲಿಗೆ ಬಂದಿರುತ್ತಾರೆ. ಅಷ್ಟರಲ್ಲಿ ಅವರೆಲ್ಲರೂ ನನ್ನ ಮನೆಯ ಗೋಡೆಯನ್ನು ಕೆಡವಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಪೋಲೀಸರು ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಸಿವಿಲ್ ಕೋರ್ಟ್ ವ್ಯಾಪ್ತಿಗೆ ಬರುತ್ತದೆ ಅಲ್ಲೇ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ ನಂತರ ನಾನು ವೃತ್ತ ನಿರೀಕ್ಷಕರು ಹಾಗೂ ಎಸ್ ಪಿರವರಿಗೆ ದೂರನ್ನು ನೀಡಿರುತ್ತೇನೆ. ಅವರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನನಗೆ ನಷ್ಟ ಪರಿಹಾರ ಕೊಡಿಸಿ ಆರೋಪಿತರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1, ಸಾಕ್ಷಿಯ ಸಹಿ ನಿಪಿ.1 ಎ, 4 ಅಂಚೆ ರಸೀದಿಗಳು ನಿಪಿ.2, 3 ಅಂಚೆ ಸ್ವೀಕೃತಿ ನಿಪಿ.3, ಹಿಂಬರಹ ನಿಪಿ.4, ಅಸಲು ದಾವಾ ಸಂ.174/25 ರ ವಾದ ಪತ್ರದ ಜೆರಾಕ್ಸ್ ಪ್ರತಿ ನಿಪಿ.5 ಎಂದು, 4 ಫೋಟೋಗಳು ನಿಪಿ.6 ರಿಂದ 9 ಎಂದು ಗುರುತಿಸಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.